ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್:
www.cescmysore.org

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seeommys@gmail.com

ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ ಉಸ-181 ದಿನಾಂಕ:11.12.2018

13

# ಸಭೆಯ ನಡಾವಳಿಗಳು

ದಿನಾಂಕ:-06.12.2018 ರಂದು ಗುಂಡ್ಲುಪೇಟೆ ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

"DRAFT"

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಟಿ.ಎಸ್ ಉಮೇಶ್ : ಅಧೀಕ್ಷಕ ಇಂಜಿನಿಯರ್ (ವಿ), ಚಾ.ನಗರ ಕೊಡಗು ವೃತ್ತ ಮೈಸೂರು.
2. ಶ್ರೀ ಬೆಳ್ಳಯ್ಯ : ಲೆಕ್ಕಾಧಿಕಾರಿಗಳು ಆಂತರೀಕ ಲೆಕ್ಕ ಪರಿಶೋಧನೆ, ಚಾಮರಾಜನಗರ ವಿಭಾಗ.
3. ಶ್ರೀ ಕೆ.ಎಂ.ಸಿದ್ದಲಿಂಗಪ್ಪ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಉಪವಿಭಾಗ.
4. ಶ್ರೀಮತಿ ಲಾವಣ್ಯ : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ ಗುಂಡ್ಲುಪೇಟೆ ಉಪವಿಭಾಗ.
5. ಶ್ರೀ ಜಿ.ಮಹೇಶ್ : ಸಹಾಯಕ ಇಂಜಿನಿಯರ್(ವಿ), ಗುಂಡ್ಲುಪೇಟೆ ಪಟ್ಟಣ ಶಾಖೆ.
6. ಶ್ರೀ ಶಿವಲಿಂಗ : ಕಿರಿಯ ಇಂಜಿನಿಯರ್(ವಿ), ಹಂಗಳ ಶಾಖೆ.
7. ಶ್ರೀ ಹಣಮಂತ : ಪ್ರಭಾರ ಕಿರಿಯ ಇಂಜಿನಿಯರ್(ವಿ), ತೆರಕಣಾಂಬಿ ಶಾಖೆ.
8. ಶ್ರೀ ಸಮೀವುಲ್ಲಾ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಬೊಮ್ಮಲಾಪುರ ಶಾಖೆ.
9. ಶ್ರೀ ನಾಗೇಂದ್ರ : ಕಿರಿಯ ಇಂಜಿನಿಯರ್(ವಿ), ಮಾಡ್ರಹಳ್ಳಿ ಶಾಖೆ.
10. ಶ್ರೀಮತಿ ಪಿ.ಮಂಜುಳ : ಪ್ರಭಾರ ಕಿರಿಯ ಸಹಾಯಕಿ ಕಂದಾಯ ಶಾಖೆ.
11. ಶ್ರೀ ಆನಂದ್ ಎಸ್.ಎನ್ : ಸಹಾಯಕ ಕಂದಾಯ ಶಾಖೆ

ಸಭೆಯಲ್ಲಿ ಗುಂಡ್ಲುಪೇಟೆ ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ

| ಕ್ರ.ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1 | ಕುಮಾರ್ ಗುಂಡ್ಲುಪೇಟೆ | * ಮಲ್ಲೇಶ್ ಟಿ.ಸಿ ಯಲ್ಲಿ ಲೈನ್ ಸ್ಯಾಗ್ ಆಗಿದ್ದು ಮಧ್ಯಂತರ ಕಂಬವನ್ನು ಅಳವಡಿಸಲು ತಿಳಿಸಿರುತ್ತಾರೆ. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ ರವರಿಗೆ ಮಧ್ಯಂತರ ಕಂಬವನ್ನು ಅಳವಡಿಸಲು ಆದೇಶಿಸಿರುತ್ತಾರೆ. |
| 2 | ವೀರನಾಯ್ಕ ಕಗ್ಗಳ | * ವೀರನಾಯ್ಕ ರವರು ಅವರ ನೀರಾವರಿ ಪಂಪ್‌ಸೆಟ್‌ಗೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ತೆರಕಣಾಂಬಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. |

ಪು.ತಿ.ನೋ

| | | | |
|---|---|---|---|
| 3 | ಕೆ.ಸಿ.ಮಧು ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರು ಗುಂಡ್ಲುಪೇಟೆ | * ಗುಂಡ್ಲುಪೇಟೆ ಉಪವಿಭಾಗದಲ್ಲಿ ನಿರಂತರ ಜ್ಯೋತಿ ಕೆಲಸಗಳು ಸಮರ್ಪಕವಾಗಿ ಆಗಿಲ್ಲವೆಂದು ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ನಿರಂತರ ವಿದ್ಯುತ್ತನ್ನು ಒದಗಿಸುತ್ತಿಲ್ಲವೆಂದು ತಿಳಿಸಿದರು ಹಾಗೂ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸಿಲ್ಲದಿರುವುದರಿಂದ ಇವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಕೆ.ಪಿ.ಟಿ.ಸಿ.ಎಲ್ ನಿಂದ ಬ್ರೇಕರ್‌ಗಳು ಸರಬರಾಜಾಗದೇ ಇರುವುದರಿಂದ ಸಮರ್ಪಕವಾಗಿ ನಿರಂತರ ವಿದ್ಯುತ್ತನ್ನು ನೀಡಲು ಸಾಧ್ಯವಾಗಿರುವುದಿಲ್ಲ ಹಾಗೂ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಕಾಮಗಾರಿ ಕೆಲಸ ಪೂರ್ಣಗೊಳಿಸದೆ ಇರುವುದರಿಂದ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ತಿಳಿಸಿದರು. |
| 4 | ಪರಶಿವಮೂರ್ತಿ, ಸಿದ್ದಪ್ಪ ಕೆಲಸೂರುಪುರ | * ಕೆಲಸೂರುಪುರ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸರಬರಾಜು ಇಲ್ಲದಿರುವ ಬಗ್ಗೆ ತಿಳಿಸಿದರು. | * ಕೆಲಸೂರುಪುರ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸರಬರಾಜಿಗಾಗಿ ಈಗಾಗಲೇ ಪರಿವರ್ತಕವನ್ನು ಅಳವಡಿಸಲಾಗಿದ್ದು ಆದರೆ ಲೈನನ್ನು ಎಳೆಯಲು ಗ್ರಾಮದ ಕೆಲವರು ಅಡ್ಡಿಪಡಿಸಿರುವುದರಿಂದ ತಡೆಯುಂಟಾಗಿದೆಯೆಂದು ತಿಳಿಸಿದರು ಹಾಗೂ ಶಾಖಾಧಿಕಾರಿ ಮಾಡ್ರಹಳ್ಳಿ ರವರಿಗೆ ಕೆಲಸ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ತಿಳಿಸಿದರು. |
| 5 | ಬಸವಶೆಟ್ಟಿ ಮುಂಟೀಪುರ | * ನೀರಾವರಿ ಪಂಪ್‌ಸೆಟ್‌ಗೆ ಅಳವಡಿಸಿರುವ ಪರಿವರ್ತಕವು ವಿಫಲವಾಗಿರುವ ಬಗ್ಗೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾಡ್ರಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ . ಪರಿಶೀಲಿಸಿ ಜರೂರಾಗಿ ಪರಿವರ್ತಕ ಬದಲಾಯಿಸಲು ತಿಳಿಸಿದರು. |
| 6 | ಗುರು ಗುಂಡ್ಲುಪೇಟೆ | * ಸ್ಮಶಾನ ಟಿ.ಸಿ ಪ್ರದೇಶದಲ್ಲಿ ಕಂಬಗಳು ಬಾಗಿರುವ ಬಗ್ಗೆ ತಿಳಿಸಿದರು. | * ಇದಕ್ಕೆ ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಸಹಾಯಕ ಇಂಜಿನಿಯರ್ ಪಟ್ಟಣ ಶಾಖೆ ರವರಿಗೆ ಬಾಗಿರುವ ಕಂಬಗಳನ್ನು ಸರಿಪಡಿಸಲು ಸೂಚಿಸಿದರು. |

13/12

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ. ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು

11/12/18

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಚಾಮರಾಜನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ
4. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು..
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗುಂಡ್ಲುಪೇಟೆ ಉಪವಿಭಾಗ ರವರ ಮಾಹಿಗಾಗಿ.
7. ಹಿಆಸ/ಪ್ರಕ/ಕಡತ.